ಆರೈಕೆ ಮಾಡೋಳು ಅಮ್ಮನಾಗಬಾರ್ದಾ?"

ಮಾಲಕ್ಷ್ಮಿ ಮತ್ತೊಮ್ಮೆ ಪಾಪಣ್ಣನ ನೆತ್ತಿ ಚುಂಬಿಸಿದಳು. 'ನಾವು ಎಂತವರೂಂತ ನಮ್ಮ ಅಂತರಾತ್ಮಕ್ಕೆ ಗೊತ್ತಿದ್ರೆ ಸಾಕು' ಎನ್ನುವ ಜನಾರ್ದನನ ಮಾತು ಮನದಲ್ಲಿ ಪ್ರತಿಧ್ವನಿಸಿದಂತಾಯ್ತು.

"ನೋಡು, ಅನುಕಂಪ ಹುಟ್ಟಿಸೋ ಮಾತಾಡಿ ನಿನ್ನ ಒಪ್ಪಿಸಬೇಕು ಅನ್ನೋ ಹಟ ನಂಗಿಲ್ಲ. ಮನಃಪೂರ್ವಕವಾಗಿ ನೀನು ಒಪ್ಪಿದ್ರೆ ಮಾತ್ರಾ..."

"ಬೇರೆ ದಾರಿ ಇಲ್ಲಾಂತಾದ್ರೆ ಮತ್ತೇನು ಮಾಡೋದು?" ಅಂದಳು ಮಾಲಕ್ಷ್ಮಿ. ತಲೆ ಬಗ್ಗಿತು. ಕಣ್ಣುಗಳು ನೆಲ ನೋಡಿದುವು.

"ನಿನ್ನ ಅಪ್ಪ, ಅಮ್ಮನ್ನ ಒಂದು ಮಾತು ಕೇಳು.."

"ಅವರು ನಾ ಹೇಳಿದ ಹಂಗೆ..."

ನೇತ್ರನನ್ನು ಹೀಗೇ ಬೆಳೆಸಿದ್ದಲ್ಲವಾ? ಅವಳು ಹೇಳಿದ್ದಕ್ಕೆಲ್ಲಾ ಕುಣಿದಿದ್ದಲ್ಲವಾ? ಅವಳು ಹಾಗ್ಯಾಕೆ? ಇವಳು ಹೀಗ್ಯಾಕೆ? ಜನಾರ್ದನ ನಿಟ್ಟುಸಿರ್ಗರೆದ.

★★★

'ಇನ್ನೂ ಒಂದಿದೆ ಮಾಲಕ್ಷ್ಮಿಗೆ ಹೇಳುವುದಕ್ಕೆ. ಆ ಕುರಿತು ಬರವಣಿಗೆಯಲ್ಲಿ ದಾಖಲಿಸಿಡಲಿಕ್ಕೆ' ಮರುದಿನ ಬೆಳಗಾಗುವ ಹೊತ್ತಲ್ಲಿ ಜನಾರ್ದನನ ಮನಸ್ಸಲ್ಲಿ ಹೀಗೊಂದು ಸಂಚಲನ. ತಾನು ಮಾಲಕ್ಷ್ಮಿಯನ್ನು ಮದುವೆಯಾದರೆ ನೇತ್ರಾ ಯಾವತ್ತಿಗೂ ತನ್ನನ್ನು ಕ್ಷಮಿಸುವುದಿಲ್ಲ. ತಾನು ಸತ್ತು ಹೋದ ಕಾಲಕ್ಕೆ ತನ್ನ ಹೆಣವನ್ನೂ ಅವಳು ಹೀಗಳೆಯುವಂತಾಗಬಾರದು. 'ಈಗ ಮಾತ್ರಾ ನಾವು ಬೇಕಾಯ್ತಲ್ವಾ?' ಎನ್ನುವ ಹಂಗಿನ ಮಾತು ಅವಳ ಬಾಯಿಂದ ಬರಬಾರದು. 'ದೇಹದಾನ'ದ ಕುರಿತು ಅಷ್ಟಿಷ್ಟು ತಿಳಿವಳಿಕೆ ಹೊಂದಿದ್ದ ಜನಾರ್ದನ ಆ ಕುರಿತು ದೃಢನಿರ್ಧಾರ ಮಾಡಿದ.

ಅನೂಹ್ಯ ತಿರುವುಗಳಿಂದ ಕೂಡಿ ಕಟ್ಟುಕತೆಗಿಂತಲೂ ಹೆಚ್ಚು ಕಲ್ಪನಾತೀತವಾಗಿರುವ ವಾಸ್ತವ ಬದುಕಿನ ಕುರಿತು ಯೋಚಿಸಿದಷ್ಟೂ ಅವನಿಗೆ ದಿಗ್ಭ್ರಮೆ ಹಿಡಿದಂತಾಗುತ್ತಿದೆ. ಬಣ್ಣ ಬದಲಿಸುವ ಗೋಸುಂಬೆಗಳಂತಿರುವ ಸಂಬಂಧಗಳ ಕುರಿತಾದ ಸತ್ಯ ಮನಸ್ಸನ್ನು ಗೀರುತ್ತಿದೆ. ಈ ಕನವರಿಕೆಗಳ ನಡುವೆಯೂ ಹಿಮ್ಮಡಿಯೊಳಗೆ ಮುರಿದುಕೊಂಡು ಯಮಯಾತನೆ ಕೊಡುತ್ತಿದ್ದ ಮುಳ್ಳು ಕೀವುಗಟ್ಟಿ ಹೊರಬಂದ ನಂತರದ ಹಿತ, ಸಮಾಧಾನ, ನೆಮ್ಮದಿಯ ಭಾವ...

## ವಸುಮತಿ ಉಡುಪ

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಕಿರಣಕೆರೆ ಸ್ವಗ್ರಾಮ. ಪ್ರಸ್ತುತ ಮೈಸೂರಿನಲ್ಲಿ ವಾಸ. ಕಥೆ, ಕಾದಂಬರಿ, ನಾಟಕ, ಶಿಶುಸಾಹಿತ್ಯ, ಪ್ರಬಂಧ ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರವಣಿಗೆ. ಸಮಗ್ರ ಕಥಾ ಸಂಕಲನ ಮೂರು ಭಾಗಗಳಲ್ಲಿ ಪ್ರಕಟವಾಗಿದೆ. ಮಲೆನಾಡಿನ ಪರಿಸರ, ಭಾಷೆ, ಜೀವನಶೈಲಿ ವಸುಮತಿ ಉಡುಪ ಅವರ ಬಹುತೇಕ ಕತೆಗಳ ವಸ್ತು.